ತಂತಿ: "ಯುನಿಕರ್ನಾಟಕ"
Tel. : "UNIKARNATAK

ದೂರವಾಣಿ:(0836)2215374
Phone:(0836)2215374

# ಕರ್ನಾಟಕ ವಿಶ್ವವಿದ್ಯಾಲಯ
# KARNATAK UNIVERSITY
## DHARWAD
**NAAC Accredited with "A" Grade 2014**

**LEGAL-CELL**
**ಕಾನೂನು ಕೋಶ**

ಪಾವಟೆ ನಗರ, ಧಾರವಾಡ-580003
Pavate Nagar, Dharwad-580003

ಅ.ನಂ. ಕವಿವಿ/ಕಾಕೋ/2019-20/ 4001 ದಿನಾಂಕ: 13 NOV 2019

**ಸುತ್ತೋಲೆ**

**ವಿಷಯ:** ಮಾಹಿತಿ ಹಕ್ಕು ಅಧಿನಿಯಮದ ಕಲಂ 6(1)ರಡಿ ಮಾಹಿತಿ ಕೋರಿ ಸಲ್ಲಿಸಿದ ಅರ್ಜಿದಾರರಿಂದ ದೃಢೀಕರಿಸಿದ ಗುರುತಿನ ಹಾಗೂ ವಿಳಾಸದ ಪುರಾವೆ ಪಡೆಯುವಾಗ ಮಾನ್ಯ ಪಂಜಾಬ ಮತ್ತು ಹರಿಯಾಣದ ಉಚ್ಚ ನ್ಯಾಯಾಲಯದ ತೀರ್ಪು ನಮೂದಿಸುವ ಕುರಿತು.

**ಉಲ್ಲೇಖ:** 1. ಕುಲಸಚಿವರ ಸುತ್ತೋಲೆ ಅ ನಂ/ಕಾಕೋ/2017/**8** ದಿ. 15-6-2017.
2. ಮಾನ್ಯ ಕುಲಪತಿಗಳ ಆದೇಶ ದಿ. 12-11-2019

ಮಾನ್ಯ ಪಂಜಾಬ ಮತ್ತು ಹರಿಯಾಣ ಉಚ್ಚ ನ್ಯಾಯಾಲಯವು ಪ್ರಕರಣ C.W.P No. 4787/2011 (O&M) ರಲ್ಲಿ ದಿನಾಂಕ 2.11.2012 ರಂದು ನೀಡಿದ ತೀರ್ಪು ಆಧರಿಸಿ ಸಿಂಡಿಕೇಟ ಠರಾವು ಸಂಖ್ಯೆ 17 ದಿ. 18/5/2017 ರನ್ವಯ ಹೊರಡಿಸಿದ ಉಲ್ಲೇಖಿತ ಸುತ್ತೋಲೆ ದಿ. 15/6/2017 ಪ್ರಕಾರ ಮಾಹಿತಿ ಹಕ್ಕು ಅಧಿನಿಯಮದ ಪ್ರಕರಣ 6(1)ರಡಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದಾಗ ಅರ್ಜಿದಾರರಿಂದ ದೃಢೀಕೃತ (ಸ್ವದೃಢೀಕೃತವಲ್ಲದ) ಗುರುತಿನ ಹಾಗೂ ವಿಳಾಸದ ಪುರಾವೆ ಪಡೆದು ಅರ್ಜಿದಾರರಿಗೆ ಮಾಹಿತಿ ಪೂರೈಸಲಾಗುತ್ತಿದೆ.

ಆದರೆ ವಿಶ್ವವಿದ್ಯಾಲಯದ ಸಾರ್ವಜನಿಕ ಮಾಹಿತಿ ಅಧಿಕಾರಿಗಳು/ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅರ್ಜಿದಾರರಿಗೆ ಆ ಪುರಾವೆಗಳನ್ನು ಸಲ್ಲಿಸುವಂತೆ ವಿಳಾಯಿಸುವ ಪತ್ರದಲ್ಲಿ ಮೇಲ್ಕಾಣಿಸಿದ ಮಾನ್ಯ ಉಚ್ಚ ನ್ಯಾಯಾಲಯದ ಆ ಉಲ್ಲೇಖವನ್ನು ನಮೂದಿಸದಿರುವುದು ಕಂಡು ಬರುತ್ತದೆ. ಇದು ಅನಾವಶ್ಯಕ ಸಮಸ್ಯೆಗಳಿಗೆ ಕಾರಣವಾಗುತ್ತಿದೆ.

ಕಾರಣ, ಆ ದಿ. 15/6/2017ರ ಸುತ್ತೋಲೆ ಮುಂದುವರೆಕೆಯೊಂದಿಗೆ ಈ ಮೂಲಕ ವಿಶ್ವವಿದ್ಯಾಲಯದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ/ ಸಹಾಯಕ ಮಾಹಿತಿ ಅಧಿಕಾರಿಗಳಿಗೆ ತಿಳಿಸುವುದೇನೆಂದರೆ ಗುರುತಿನ ಹಾಗೂ ವಿಳಾಸದ ದೃಢೀಕೃತ **(ಸ್ವದೃಢೀಕೃತವಲ್ಲದ)** ಪುರಾವೆಗಳನ್ನು ಸಲ್ಲಿಸುವಂತೆ ಅರ್ಜಿದಾರರಿಗೆ ವಿಳಾಯಿಸುವ ಪತ್ರದಲ್ಲಿ ಗೌರವಾನ್ವಿತ ಪಂಜಾಬ ಮತ್ತು ಹರಿಯಾಣ ಉಚ್ಚ ನ್ಯಾಯಾಲಯ ನೀಡಿದ ದಿ. 2/11/2012ರ ಮೇಲ್ಕಾಣಿಸಿದ ಪ್ರಕರಣದ ಉಲ್ಲೇಖವನ್ನು ನಮೂದಿಸುವುದು ಅವಶ್ಯವಿದೆ.

ಮುಂದುವರೆದು ಈಗಾಗಲೇ ಸದರ ದಿ. 15/6/2017ರ ಸುತ್ತೋಲೆಯಲ್ಲಿ ಕೇಳಿಕೊಂಡಂತೆ ಮಾಹಿತಿ ಹಕ್ಕು ಅಧಿನಿಯಮದಡಿ ನಿಗದಿ ಪಡಿಸಿದ ಅವಧಿಯಲ್ಲಿ ಮಾಹಿತಿ ಪೂರೈಸಲು ಮುತುವರ್ಜಿ ವಹಿಸಬೇಕೆಂದು ಹಾಗೂ ಯಾವುದಾದರೂ ಸರ್ಟಿಫಿಕೇಟ್ / ಅಂಕಪಟ್ಟಿ ಮುಂತಾದ ದಾಖಲೆಗಳನ್ನು ಪೂರೈಸುವ ಸಂಧರ್ಭದಲ್ಲಿ **"ಮಾಹಿತಿ ಹಕ್ಕು ಅಧಿನಿಯಮದಡಿ ಪೂರೈಸಿದೆ"** ಎಂಬ ಶಿರೋನಾಮೆಯನ್ನು ನಮೂದಿಸಬೇಕೆಂದೂ ಸಹ ಸೂಚಿಸಲಾಗಿದೆ. ಇದಲ್ಲದೇ ಮಾಹಿತಿ ಪೂರೈಸುವಾಗ ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ ಇವರು ಮೇಲ್ಮನವಿ ಪ್ರಾಧಿಕಾರಿಗಳಾಗಿರುತ್ತಾರೆಂದು ಅವರ ದೂರವಾಣಿ, ಇಮೇಲ್ ಮಾಹಿತಿಯನ್ನೊಳಗೊಂಡಂತೆ ನಮೂದಿಸುವುದು ಅಧಿನಿಯಮದಡಿ ಅಗತ್ಯವಿದೆ.

**ಕುಲಸಚಿವರು** 13/11/19

**ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1) ಎಲ್ಲ ಆಡಳಿತ ವರ್ಗ/ಶೈಕ್ಷಣಿಕ/ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು/ನಿರ್ದೇಶಕರು/ಸಂಯೋಜಕರು/ ವಿಶೇಷಾಧಿಕಾರಿಗಳು/ಕ್ಷೇಮಪಾಲಕರು/ ಆಡಳಿತಾಧಿಕಾರಿಗಳು, ಕವಿವಿ, ಧಾರವಾಡ.
2) ಕವಿವಿ ಘಟಕ ಮಹಾವಿದ್ಯಾಲಯಗಳು/ಆಡಳಿತಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರಗಳು-ಕಾರವಾರ, ಹಾವೇರಿ ಮತ್ತು ಗದಗ.
3) ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕವಿವಿ ಧಾರವಾಡ ಇವರ ಮಾಹಿತಿಗಾಗಿ ಹಾಗೂ ಸುತ್ತೋಲೆಯ ಸ್ಕ್ಯಾನಿಂಗ್ ಮಾಡಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಪ್ರತಿ ಮಾಹಿತಿಗಾಗಿ:**

1) ಕುಲಪತಿಗಳ ಆಪ್ತಕಾರ್ಯದರ್ಶಿಗಳು, ಕವಿವಿ, ಧಾರವಾಡ.
2) ಕುಲಸಚಿವರ ಆಪ್ತಸಹಾಯಕರು, ಕವಿವಿ, ಧಾರವಾಡ
3) ಆಪ್ತಸಹಾಯಕರು, ಕುಲಸಚಿವರು (ಮೌಲ್ಯಮಾಪನ) ಕವಿವಿ, ಧಾರವಾಡ.
4) ಹಣಕಾಸು ಅಧಿಕಾರಿಗಳ ಆಪ್ತಸಹಾಯಕರು, ಕವಿವಿ, ಧಾರವಾಡ